**◆ ಈ ಬಾರಿಯ 'ಜ್ಞಾನಪೀಠ' ನಿಮಗೆ ಸಂದಿದೆ. ಹಾರ್ದಿಕ ಅಭಿನಂದನೆಗಳು. ಈ ವಿಶೇಷ ಸಂದರ್ಭದಲ್ಲಿ ನಿಮ್ಮ ಮೊದಲ ಪ್ರತಿಕ್ರಿಯೆ ಏನು?**

ಧನ್ಯವಾದಗಳು. ನಾನು ಬರೆಯಬೇಕಾದುದು ಬಹಳಷ್ಟಿತ್ತು. ಆದರೆ ತುಂಬಾ ಕಡಿಮೆ ಬರೆಯುವುದಷ್ಟೇ ನನ್ನಿಂದ ಸಾಧ್ಯವಾಯಿತು. ನಾನು ನೋಡಿರುವುದು ಬಹಳ; ಕೇಳಿದ್ದು ತುಂಬಾ; ಅನುಭವಿಸಿದ್ದೂ ಅತ್ಯಧಿಕ. ಬರೆದಿದ್ದು ಮಾತ್ರ ತುಂಬಾ ಕಡಿಮೆ. ಮುಂದಿನ ದಿನಗಳಲ್ಲಿ ಸಾಧ್ಯವಾದಷ್ಟನ್ನು ಖಂಡಿತಾ ಬರೆಯುತ್ತೇನೆ. ನಾನು ಜೀವಿಸಿರುವಷ್ಟು ದಿನವೂ ನನ್ನ ಲೇಖನಿಯನ್ನು ಹಿಂಬಾಲಿಸುತ್ತೇನೆ. ಆದರೆ ನನ್ನ ಬದುಕು ಅಂತ್ಯದ ಕಡೆಗೆ ತುಂಬಾ ವೇಗವಾಗಿ ಸಾಗುತ್ತಿದೆ. ಅಷ್ಟೊಂದು ವೇಗವಾಗಿ ಬರೆಯುವುದು ನನ್ನಿಂದ ಸಾಧ್ಯವಿಲ್ಲ; ಈ ವಿಷಯದಲ್ಲಿ ಅಸಹಾಯಕತೆಯ ಅನುಭವವಾಗುತ್ತಿದೆ. ಈ ಕಾರಣಕ್ಕಾಗಿ ವಿಷಾದವೂ ಉಂಟಾಗುತ್ತಿದೆ. ನನಗೆ ಈಗ ದೊರಕಿರುವುದು ಬಹಳ ದೊಡ್ಡ ಪುರಸ್ಕಾರ, ನಿಜ. ಖಂಡಿತವಾಗಿಯೂ ಸಂತೋಷವಾಗಿದೆ. ಖುಷಿಪಡುತ್ತೇನೆ. ಈ ಸಂದರ್ಭದ ಭಾವನೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವುದು ಸ್ವತಃ ನನಗೇ ಕಷ್ಟವಾಗುತ್ತಿದೆ. ಸಂತೋಷವನ್ನು ಹಂಚಿಕೊಳ್ಳುವುದಕ್ಕೆ ನನ್ನ ಬಳಿ ಶಬ್ದಗಳಿಲ್ಲ. 'ತುಂಬಾ ಸಿಹಿಯೆನ್ನಿಸಿತು' ಅನ್ನುವಂತಿಲ್ಲ. ಏಕೆಂದರೆ ನನ್ನೊಳಗೇ ಸಾಕಷ್ಟು 'ಸಿಹಿ' ಸೇರಿಕೊಂಡುಬಿಟ್ಟಿದೆ. ಮಧುಮೇಹಿಯಾದ ನಾನು ಈ ಸಿಹಿಯನ್ನು ಆಸ್ವಾದಿಸುವುದು ಹೇಗೆ! (ಕಿರುನಗೆ)

**◆ ನಿಮ್ಮ ಕಾವ್ಯಗಳಲ್ಲಿನ ಉಪಮೆಗಳು, ಗದ್ಯದಲ್ಲಿನ ಹೋಲಿಕೆಗಳು ಸುಲಭದ ಗ್ರಹಿಕೆಗೆ ನಿಲುಕುವುದಿಲ್ಲ. ಆಳವಾದ ಚಿಂತನೆಗೆ ಸದಾ ಅವಕಾಶ ಮಾಡಿಕೊಡುತ್ತವೆ. ಸಂಪೂರ್ಣ ವಿಭಿನ್ನವಾದ ಭಾವುಕ ಮತ್ತು ವಾಸ್ತವಿಕ ಅನುಭವವನ್ನು ಓದುಗರಿಗೆ ಒದಗಿಸುತ್ತವೆ. ಕೆಲವೊಮ್ಮೆ ನಿಮ್ಮ ಕಾವ್ಯದಲ್ಲಿ ಗಿಣಿಗಳೇ ಗಿಡಗಳಾಗಿ ಪರಿವರ್ತನೆಗೊಳ್ಳುತ್ತವೆ; ಸೂರ್ಯನು ಅಸ್ತಮಿಸುವಾಗ ಪಶ್ಚಿಮದ ಕಡೆಗೆ ಬಾಗುತ್ತಾನೆ ಮತ್ತು ತನ್ನ ಬಳಿಯಿರುವ ಕೀಲಿಕೈ ಮೂಲಕ ಪಶ್ಚಿಮದ ದ್ವಾರವನ್ನು ತೆರೆಯುತ್ತಾನೆ. ನೀವು ಬದುಕನ್ನೂ ಕೂಡ ಇದೇ ರೀತಿಯಲ್ಲಿ ಅನುಭವಿಸುತ್ತೀರಾ? ಒಬ್ಬ ನಿವೃತ್ತ ಪ್ರಾಧ್ಯಾಪಕರಾಗಿ, ಪತಿಯಾಗಿ, ತಂದೆಯಾಗಿ, ತಾತನಾಗಿ ನೀವು ವಾಸ್ತವಿಕತೆಯನ್ನು ಯಾವ ರೀತಿಯಲ್ಲಿ ಗ್ರಹಿಸುತ್ತೀರಿ? ನಿಮ್ಮ ಬರವಣಿಗೆಯಲ್ಲಿನ 'ಜಾದೂ' ದಿನನಿತ್ಯದ ಆಗುಹೋಗುಗಳಲ್ಲಿ, ನೀವು ಗ್ರಹಿಸುವ ವಿಧಾನದಲ್ಲಿ ಅಡಗಿದೆಯೇನು?**

ಹೌದು... ಎಲ್ಲ ಕವನಗಳೂ ವಾಸ್ತವಿಕತೆಯ ಚಿಪ್ಪಿನೊಳಗೇ ಅಡಗಿ ಕುಳಿತಿರುತ್ತವೆ. ಅವು ಪ್ರಕಟವಾಗುವುದು ಅವುಗಳ 'ಸಮಯ' ಬಂದಾಗ ಮಾತ್ರ. ಇಂತಹ 'ಸೂಕ್ತ ಸಮಯ'ದಲ್ಲಿ ಗಿಣಿಗಳು ಮರದೊಳಗೆ ಐಕ್ಯವಾಗಿಬಿಡುತ್ತವೆ. ಎಲೆಗಳ ಹಸಿರು ಬಣ್ಣದೊಂದಿಗೆ ಗಿಣಿಗಳ ಅಸ್ತಿತ್ವ ತನ್ನಿಂತಾನೇ ಮರೆಯಾಗಿಬಿಡುತ್ತದೆ. ಗಿಣಿಗಳು ಅಲ್ಲಿಂದ ಮತ್ತೆ ಹಾರಿಹೋದ ನಂತರವೂ ಅವು ಬಿಟ್ಟುಹೋದ ಕೆಲವು 'ವಿಶೇಷ ನೆನಪು'ಗಳು ಹಾಗೆಯೇ ಉಳಿದುಬಿಡುತ್ತವೆ. ಆ ನೆನಪುಗಳು ಶಾಶ್ವತ. ಏಕೆಂದರೆ ಆ ನೆನಪುಗಳಿಂದ ಇನ್ನಷ್ಟು ನೆನಪುಗಳು ಹುಟ್ಟಿಕೊಳ್ಳುತ್ತವೆ! ಒಂದು ರೀತಿಯಲ್ಲಿ ನೆನಪು ಎನ್ನುವುದು ರಕ್ತಬೀಜಾಸುರನಂತೆ. ಅವುಗಳಿಗೆ ಶಾಶ್ವತ ಸಾವು ಇರುವುದಿಲ್ಲ.

ನಾನು ಸಹಾಯಕ ಪ್ರಾಧ್ಯಾಪಕನಾಗಿ ಸೇವೆ ಸಲ್ಲಿಸಿದ್ದು ನನ್ನ ದಿನನಿತ್ಯದ ಬದುಕಿನ ಒಂದು ಭಾಗವಾಗಿತ್ತು. ಈಗ ಅದು ನನ್ನ ನೆನಪಿನ ಲೋಕವನ್ನು ಸೇರಿಕೊಂಡಿದೆ. ಭೂತಕಾಲವು ವಾಸ್ತವದಲ್ಲಿ ಯಾವತ್ತೂ ಸರಿದು ಹೋಗಿರುವುದಿಲ್ಲ. ಅದು ಒಂದು ನಿರ್ದಿಷ್ಟ ಸ್ಥಳದಲ್ಲಿ ಸಂಗ್ರಹವಾಗುತ್ತಿರುತ್ತದೆ; ನೆನಪಿನ ರೂಪದಲ್ಲಿ ಮತ್ತೆ ಮುನ್ನೆಲೆಗೆ ಬರುವುದಕ್ಕೆ ಸದಾ ಕಾತರಿಸುತ್ತಿರುತ್ತದೆ. ಪ್ರತಿಯೊಬ್ಬರ ಬದುಕಿನಲ್ಲಿಯೂ ಇಂತಹ 'ಭೂತ'ಗಳಿವೆ. ಆದರೆ ಅವುಗಳ ರೂಪ ಮಾತ್ರ ಆಯಾ ವ್ಯಕ್ತಿಯು ಕಳೆದ ಜೀವನವನ್ನು ಅವಲಂಬಿಸಿರುತ್ತದೆ. ಸಮಯವು ಎಲ್ಲ ಕಾಲದಲ್ಲಿಯೂ ಅಸ್ತಿತ್ವದಲ್ಲಿದೆ. ಆದರೆ ಆ ಸಮಯವನ್ನು ನಾವು ದಾಟಿಕೊಂಡು ಬರುತ್ತಿದ್ದೇವೆ. ನಾವು ಕಳೆಯುವ ಪ್ರತಿ ಕ್ಷಣವೂ ಭೂತಕಾಲವಾಗಿ ಪರಿವರ್ತನೆಗೊಳ್ಳುತ್ತ ವರ್ತಮಾನದಲ್ಲಿ ನೆನಪಿನ ರೂಪವನ್ನು ಪಡೆದುಕೊಂಡಿರುತ್ತದೆ. ವರ್ತಮಾನ ಎನ್ನುವುದು ಸಮಯದ ಒಂದು ಆಶ್ಚರ್ಯಕರ ರೂಪ; ಇದನ್ನು ನಾವು ನಿರಂತರವಾಗಿ ಕಳೆಯುತ್ತಿರುತ್ತೇವೆ